## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಇ. ಪದ್ಮನಾಭ, ಭೂ ವಿಜ್ಞಾನಿ ಇವರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ದಾಖಲಿಸುವ ಸಲುವಾಗಿ ದೆಹಲಿಗೆ ತೆರಳಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :- ಶ್ರೀ ಮುಕ್ಕಣ್ಣಕರಿಗಾರ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ರಾಯಚೂರು ಇವರ ಪತ್ರ ದಿನಾಂಕ: 13.11.2013.

2) ಶ್ರೀ ರಾಮನಾಥನ್, ಲೀಗಲ್ ಸೆಲ್, ಕರ್ನಾಟಕ ಭವನ, ದೆಹಲಿ ಇವರ ದೂರವಾಣಿ ಸಂದೇಶ ದಿನಾಂಕ:11.11.2013 ಮತ್ತು 12.11.2013.

* * * * *

**ಪ್ರಸ್ತಾವನೆ:**

ಶ್ರೀ ಇ.ಪದ್ಮನಾಭ, ದಿನಗೂಲಿ ಭೂ ವಿಜ್ಞಾನಿ, ಇವರು ಸೇವಾ ಸಕ್ರಮಾತಿ ಕುರಿತು ಮಾನ್ಯ ಉಚ್ಚ ನ್ಯಾಯಾಲಯ, ಸಂಚಾರಿ ಪೀಠ ಗುಲ್ಬರ್ಗಾ ಇಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 80442/2010ರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:12.04.2011 ರಂದು ನೀಡಿದ್ದ ತೀರ್ಪಿನ ವಿರುದ್ಧ ಸಂಚಾರಿ ಪೀಠ ಗುಲ್ಬರ್ಗಾದಲ್ಲಿ ಮೇಲ್ಮನವಿ ಸಂಖ್ಯೆ : 10270/2011 ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾ ಮಾಡಿ ರಿಟ್ ಅರ್ಜಿ ಸಂಖ್ಯೆ:80442/2010ರಲ್ಲಿ ನೀಡಿದ್ದ ತೀರ್ಪನ್ನು ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದ್ದು, ಇದರ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ.ದಾಖಲಿಸಲು ಗುಲ್ಬರ್ಗಾ ಉಚ್ಚ ನ್ಯಾಯಾಲಯದಲ್ಲಿ ಅಫಿಡವಿತ್ ಸಲ್ಲಿಸಿದ್ದು, ಸದರಿ ಪ್ರತಿಯನ್ನು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ಅಡ್ವೋಕೇಟ್ ಜನರಲ್ ರವರ ಕಛೇರಿಯಲ್ಲಿ ನೀಡಲಾಗಿರುತ್ತದೆಂದು, ರಾಜ್ಯ ಸರ್ಕಾರದ ಪರವಾಗಿ ಸಲ್ಲಿಸಲಾಗಿದ್ದ ಎಸ್.ಎಲ್.ಪಿ.ಯನ್ನು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಾರ್ ಕಛೇರಿಯು ಕೆಲವು ಆಕ್ಷೇಪಣೆಗಳೊಂದಿಗೆ ಹಿಂದಿರುಗಿಸಿದ್ದು, ಹೆಚ್ಚಿನ ಮಾಹಿತಿ ನೀಡಲು ಉಲ್ಲೇಖ (2)ರಲ್ಲಿ ಶ್ರೀರಾಮನಾಥನ್ (ರಾಜನ್), ಲೀಗಲ್ ಸೆಲ್, ದೆಹಲಿ ಇವರು ತಿಳಿಸಿರುತ್ತಾರೆಂದು, ಶ್ರೀ ಮುಕ್ಕಣ್ಣಕರಿಗಾರ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ರಾಯಚೂರು ಇವರು ಮೇಲೆ ಓದಲಾದ ದಿನಾಂಕ:13.11.2013ರ ಪತ್ರದಲ್ಲಿ ತಿಳಿಸಿ, ಸುಪ್ರೀಂಕೋರ್ಟ್ ದಿನಾಂಕ:15.11.2013ರಂದು ರಜೆಯಿಂದ ಪುನರಾರಂಭವಾಗುತ್ತದೆ. ಆದ್ದರಿಂದ ವಿಶೇಷ ರಜೆ ಅರ್ಜಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಗಳೊಂದಿಗೆ ದಿನಾಂಕ: 16.11.2013 ರಿಂದ 18.11.2013ರವರೆಗೆ ದೆಹಲಿಗೆ ತೆರಳಲು ಅನುಮತಿ ಕೋರಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 83 ಜಿಪಅ 2013, ಬೆಂಗಳೂರು, ದಿನಾಂಕ.13.11.2013

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಇ.ಪದ್ಮನಾಭ, ದಿನಗೂಲಿ ಭೂ ವಿಜ್ಞಾನಿ, ಇವರು ಸೇವಾ ಸಕ್ರಮಾತಿ ಕುರಿತು ಮಾನ್ಯ ಉಚ್ಚ ನ್ಯಾಯಾಲಯ, ಸಂಚಾರಿ ಪೀಠ, ಗುಲ್ಬರ್ಗಾ ಇಲ್ಲಿ

..2..

ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 80442/2010ರ ಪ್ರಕರಣದಲ್ಲಿ ನೀಡಿದ್ದ ತೀರ್ಪಿನ ವಿರುದ್ಧ ಸದರಿ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರ ಸಲ್ಲಿಸಿದ್ದ ರಿಟ್ ಅಪೀಲ್ ಸಂಖ್ಯೆ: 10270/2011 (S-REG) ಅನ್ನು ವಜಾಗೊಳಿಸಿರುವುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ.ದಾಖಲಿಸುವ ಸಂಬಂಧ ರಾಜ್ಯ ಸರ್ಕಾರದಿಂದ ಪ್ರಾಧಿಕಾರಿಸಲ್ಪಟ್ಟ ವಕೀಲರಿಗೆ ನೆರವು ನೀಡಲು ಹಾಗೂ ಶ್ರೀರಾಮನಾಥನ್ (ರಾಜನ್), ಲೀಗಲ್ ಸೆಲ್, ದೆಹಲಿ ಇವರು ದಿನಾಂಕ:11.11.2013 ಹಾಗೂ 12.11.2013ರಂದು ತಿಳಿಸಿದಂತೆ ಹೆಚ್ಚಿನ ಮಾಹಿತಿ ನೀಡಲು ಶ್ರೀ ಮುಕ್ಕಣ್ಣಕರಿಗಾರ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ರಾಯಚೂರು ಇವರು ದಿನಾಂಕ:16.11.2013ರಂದು ನವದೆಹಲಿಗೆ ತೆರಳಲು ಸರ್ಕಾರವು ಅನುಮತಿ ನೀಡಲಾಗಿರುತ್ತದೆ.

ಈ ಅಧಿಕಾರಿಯು ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಡೆಯಲು ಅರ್ಹರಿರುತ್ತಾರೆ. ಇವರ ನಿಯೋಜನೆಯನ್ನೊಳಗೊಂಡಂತೆ ಪ್ರಯಾಣಕ್ಕೆ ಉಪಯೋಗಿಸಿಕೊಳ್ಳುವ ದಿನಗಳನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕ ಪತ್ರ 1 & 2) / (ಆಡಿಟ್) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಡಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು
4. ಶ್ರೀ ಮುಕ್ಕಣ್ಣ ಕರಿಗಾರ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ರಾಯಚೂರು.
5. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಚಾಣಕ್ಯ ಪುರಿ, ನವದೆಹಲಿ.
6. ಅಡ್ವೋಕೇಟ್ ಜನರಲ್, ಉಚ್ಚ ನ್ಯಾಯಾಲಯ ಸಂಚಾರಿ ಪೀಠ, ಗುಲ್ಬರ್ಗಾ.
7. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು
8. ಸರ್ಕಾರಿ ವಕೀಲರು, ಅಡ್ವೋಕೇಟ್ ಜನರಲ್ ರವರ ಕಛೇರಿ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು .
9. ಗ್ರಾ.ಅ.ಪಂ.ರಾಜ್ ಇಲಾಖೆಯ ಸರ್ಕಾರದ ಪ್ರದಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
10. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.